ಪರಿಶಿಷ್ಟ ಜಾತಿ : ಪಂಗಡದ ಅಭಿವೃದ್ಧಿ ನಿಗಮದ ವತಿಯಿಂದ ರಾಜ್ಯದಲ್ಲಿ ಕೊರೆಯಲಾದ ಬಾವಿಗಳು

270 (2433) : ಶ್ರೀ ಅಂಗಾರ. ಎಸ್. (ಸೂಳ್ಯ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಅಭಿವೃದ್ಧಿ ನಿಗಮದ ಅಡಿಯಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ; ಒಂದು ಕೊಳವೆಬಾವಿ ಕೊರೆಯಲು ತಗಲುವ ಖರ್ಚು ಎಷ್ಟು;

(ಆ) ಕೊರೆಯಲಾದ ಕೊಳವೆ ಬಾವಿಗಳಲ್ಲಿ ವೈಯಕ್ತಿಕ ಹಾಗೂ ಸಾಮೂಹಿಕ ಬಾವಿಗಳು ಎಷ್ಟು? (ಗಂಗಾ ಕಲ್ಯಾಣ)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಒಟ್ಟು 19419 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ನಿಗಮದ ಯೋಜನೆಯಡಿ ಒಂದು ಕೊಳವೆ ಬಾವಿಯನ್ನು ರೂ. 20,000 ಗಳಿಂದ ರೂ. 50,000 ಗಳವರೆಗೆ ಅಂದಾಜು ವೆಚ್ಚವಾಗುತ್ತಿದ್ದು, ಇದು ಆಯಾ ಪ್ರದೇಶದಲ್ಲಿನ ಕೊಳವೆ ಬಾವಿಗೆ ಅಳವಡಿಸುವ ಕೇಸಿಂಗ್ ಪೈಪಿನ ಉದ್ದವನ್ನು ಅವಲಂಬಿಸಿರುತ್ತದೆ.

(ಆ) ಪ್ರಾರಂಭದಿಂದ ದಿನಾಂಕ : 31-03-2000ರ ವರೆಗೆ ಗಂಗಾ ಕಲ್ಯಾಣ ಯೋಜನೆಯಡಿ 9712 ಕೊಳವೆ ಬಾವಿಗಳನ್ನು ಮತ್ತು ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯಡಿ 9707 ಕೊಳವೆಬಾವಿಗಳನ್ನು ಕೊರೆಯಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಗಂಗಾ ಕಲ್ಯಾಣ ಯೋಜನೆಯಡಿ ಮತ್ತು ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯಡಿ ಕೊರೆದ ಯಶಸ್ವಿ ಕೊಳವೆ ಬಾವಿಗಳ ವಿವರ

ಕ್ರಮ ಸಂಖ್ಯೆ.	ಜಿಲ್ಲೆಗಳು	ಗಂಗಾ ಕಲ್ಯಾಣ ಯೋಜನೆಯ ಕೊಳವೆ ಬಾವಿಗಳ ಸಂಖ್ಯೆ	ವೈಯಕ್ತಿಕ ನೀರಾವರಿ ಕೊಳವೆಬಾವಿಗಳ ಸಂಖ್ಯೆ
1	2	3	4
01.	ಬೆಂಗಳೂರು ನಗರ	133	062
02.	ಬೆಂಗಳೂರು (ಗ್ರಾ)	302	439
03.	ಬಾಗಲಕೋಟೆ	181	221

1	2	3	4
04.	ಶಿವಮೊಗ್ಗ	358	507
05.	ಮೈಸೂರು	319	767
06.	ಕಾರವಾರ	153	009
07.	ಗದಗ	205	149
08.	ಚಿತ್ರದುರ್ಗ	575	1000
09.	ಮಂಗಳೂರು	005	-
10.	ಹಾಸನ	429	503
11.	ಚಾಮರಾಜನಗರ	323	651
12.	ಬೆಳಗಾಂ	858	379
13.	ಬಳ್ಳಾರಿ	237	261
14.	ಬೀದರ್	185	059
15.	ಧಾರವಾಡ	114	027
16.	ಬಿಜಾಪುರ	1080	917
17.	ಹಾವೇರಿ	563	389
18.	ಕೋಲಾರ	703	901
19.	ಕೊಪ್ಪಳ	386	059
20.	ಮಂಡ್ಯ	366	445
21.	ಕೊಡಗು	049	025
22.	ರಾಯಚೂರು	068	-
23.	ತುಮಕೂರು	578	537
24.	ಉಡುಪಿ	002	-
25.	ಗುಲ್ಬರ್ಗಾ	632	248
26.	ಚಿಕ್ಕಮಗಳೂರು	501	253
27.	ದಾವಣಗೆರೆ	398	899
	ಒಟ್ಟು	9712	9707

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ: ಆದರೆ ಅವರು ಕೊಟ್ಟಿರುವ ಉತ್ತರದಲ್ಲಿ ಒಟ್ಟು 19,419 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂದು ಹೇಳಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮದಲ್ಲಿ ಒಂದು ಕೊಳವೆ ಬಾವಿಯನ್ನು ಕೊರೆಯಲು 20 ಸಾವಿರ ರೂಪಾಯಿಗಳಿಂದ 50 ಸಾವಿರ ರೂಪಾಯಿಗಳವರೆಗೆ ಅಂದಾಜು ವೆಚ್ಚವಾಗುತ್ತಿದೆ, ಕೊಳವೆ ಬಾವಿಗೆ ಅಳವಡಿಸುವ ಕೇಸಿಂಗ್ ಪೈಪ್‌ಗೆ ಸಂಬಂಧಪಟ್ಟಂತೆ ವೆಚ್ಚವನ್ನು ಭರಿಸಲಾಗುವುದೆಂದು ತಿಳಿಸಿದ್ದಾರೆ. ಈ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಸುಮಾರು 9,712 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ; ಅದೇ ರೀತಿಯಲ್ಲಿ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ ಅಡಿಯಲ್ಲಿ 9700 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎನ್ನತಕ್ಕಂಥ ಉತ್ತರನ್ನು ಕೊಟ್ಟಿದ್ದಾರೆ. ಈ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆಯಲಾದ 9,712 ಕೊಳವೆ ಬಾವಿಗಳಲ್ಲಿ ಎಷ್ಟು ಕೊಳವೆ ಬಾವಿಗಳು ಎಷ್ಟು ವಿಫಲವಾಗಿವೆ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ವಿಫಲವಾಗಿರುವಂತಹ ಕೊಳವೆ ಬಾವಿಗಳ ಸಂಖ್ಯೆ ಬಗ್ಗೆ ಈಗ ಸಧ್ಯದಲ್ಲಿ ನನ್ನ ಹತ್ತಿರ ಮಾಹಿತಿ ಇಲ್ಲ, ಅದನ್ನು ನಾನು ಕಳುಹಿಸಿಕೊಡುತ್ತೇನೆ

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನನ್ನ ತಾಲ್ಲೂಕಿನಲ್ಲಿ ಮತ್ತು ನನ್ನ ಗಮನಕ್ಕೆ ಬಂದ ಹಾಗೆ ಈ ಕೊಳವೆ ಬಾವಿಗಳನ್ನು ಕೊರೆಯಲು ಕಂಟ್ರಾಕ್ಟ್ ಯಾರು ಪಡೆದುಕೊಳ್ಳುತ್ತಾರೆ ಅವರಿಗೆ ಒಂದು ಗುರಿಯನ್ನು ನಿಗದಿ ಮಾಡುತ್ತಾರೆ. ಆ ಟಾರ್‌ಗೇಟ್ ಮುಟ್ಟುವುದಕ್ಕೆ ಮಾತ್ರ ಅವರು ಕೆಲಸ ಮಾಡುತ್ತಾರೆ. ಎಲ್ಲಿ ಕೊಳವೆ ಬಾವಿಗಳು ಅವಶ್ಯಕವಾಗಿ ಬೇಕು ಮತ್ತು ಎಲ್ಲಿ ನೀರು ಸಿಗುತ್ತದೆಯೋ ಅಲ್ಲಿ ಕೊಳವೆ ಬಾವಿಗಳನ್ನು ತೆಗೆಯುವುದಿಲ್ಲ. ಇದರಿಂದ ಹೆಚ್ಚು ಕೊಳವೆ ಬಾವಿಗಳು ವಿಫಲವಾಗಿವೆ. ಇದರಿಂದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೊಳವೆ ಬಾವಿಗಳನ್ನು ಸರ್ಕಾರ ಕೊರೆಯುತ್ತಿದೆ ಎನ್ನುವ ಕೆಲಸ ಮಾತ್ರ ಆಗುತ್ತಿದ್ದು ಇದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಎರಡನೆಯದಾಗಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಈಗಾಗಲೇ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಅದಕ್ಕೆ ಪಂಪ್ ಜೋಡಣೆ ಮಾಡಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡುವಂತಹ ಕೆಲಸ ಆಗಿಲ್ಲ. ಅವರ ಭೂಮಿ ಏನು ಇದೆ ಆ ಭೂಮಿಯಲ್ಲಿ ಅವರು ಕೃಷಿಯನ್ನು ಸಹ ಮಾಡುವುದಕ್ಕೆ ಆಗಿಲ್ಲ. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ ಕೇನ್ಯಾ ಗ್ರಾಮದ ಕನಕನಹಳ್ಳಿ ಕಾಮಗಾರಿಯನ್ನು ಪ್ರಾರಂಭ ಮಾಡಿ 6 ವರ್ಷಗಳು ಆಯಿತು. ಇದುವರೆಗೂ ಆ ಕಾಮಗಾರಿಯನ್ನು ಪೂರ್ಣ ಮಾಡಿಲ್ಲ. ಅದೇ ರೀತಿ ವೈಯಕ್ತಿಕ ನೀರಾವರಿ ಕೊಳವೆ ಬಾವಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಬೆಳ್ಳಾರಿ ಗ್ರಾಮದ ರಾಮನಾಯಕ, ಕಮಲ ವೈಫ್ ಆಫ್ ಕುಕ್ಕಸಮಗಾರ, ಇವರಲ್ಲಿ ವೈಯಕ್ತಿಕ ನೀರಾವರಿ ಕೊಳವೆ ಬಾವಿಯನ್ನು ಕೊರೆಯಲಾಗಿದೆ. ಇದುವರೆಗೂ ಅಲ್ಲಿ ಪಂಪ್ ಜೋಡನೆ ಮಾಡಿಲ್ಲ. ಸಮಾಜ ಕಲ್ಯಾಣ ಇಲಾಖೆಯಿಂದ ಈ ತುಳಿತಕ್ಕೆ ಒಳಪಟ್ಟಂತಹ ವ್ಯಕ್ತಿಗಳಿಗೆ ಕೊಟ್ಟಂತಹ ಯೋಜನೆಯನ್ನು ಯಾವ ರೀತಿಯಲ್ಲಿ ಕಾರ್ಯಗತ

ಮಾಡುತ್ತಾರೆ? ಇದರ ಬಗ್ಗೆ ಸರ್ಕಾರ ಯಾವ ರೀತಿಯಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡುತ್ತಾರೆಂದು ಸ್ಪಷ್ಟವಾದ ಉತ್ತರ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಯೋಜನೆ 1996ನೇ ಇಸವಿಯಿಂದ ಜಾರಿಗೆ ಬಂದಿದೆ. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ 9712 ಕೊಳವೆ ಬಾವಿಗಳು ಯಶಸ್ವಿಯಾಗಿವೆ. ಅವುಗಳಲ್ಲಿ 8595 ಕೊಳವೆ ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿದೆ. ಇದರಲ್ಲಿ 7396 ಕೊಳವೆ ಬಾವಿಗಳಿಗೆ ವಿದ್ಯುತ್‌ನ್ನು ಕೊಡಿಸಿದೆ. ಇನ್ನೂ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯಲ್ಲಿ 9707 ಕೊಳವೆ ಬಾವಿಗಳನ್ನು ಕೊರೆದಿದ್ದರೆ, ಅದರಲ್ಲಿ 8414 ಕೊಳವೆ ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಹಾಕಿಸಲಾಗಿದೆ ಮತ್ತು 8061 ಕೊಳವೆ ಬಾವಿಗಳಿಗೆ ವಿದ್ಯುತ್ತನ್ನು ಕೊಡಿಸಲಾಗಿದೆ. ಇನ್ನು ಮಾನ್ಯ ಸದಸ್ಯರು ಇಲ್ಲಿ ಎರಡು ಪ್ರಕರಣಗಳ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಆ ಬಗ್ಗೆ ನಾನು ಮಾಹಿತಿಯನ್ನು ತರಿಸಿ ನಾಳೆ ತಮಗೆ ತಿಳಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ವಿಶೇಷವಾಗಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ; ನನಗೆ ಇದೇ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಸಮಾಜ ಕಲ್ಯಾಣ ಇಲಾಖಾ ಮಂತ್ರಿಗಳು ಒಂದು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಅಂಗಾರ್‌ರವರಿಗೂ ಸಹ ಒಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಮತ್ತು ಅವರು ಕೇಳಿರುವುದು ಒಂದೇ ಪ್ರಶ್ನೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ತೆಗೆದುಕೊಂಡಿರುವ ಯೋಜನೆಗಳ ಸಂಖ್ಯೆ ಎಷ್ಟು? ಅವು ಯಾವುವು ಎಂದು ಕೇಳಿದ್ದೇನೆ. ನನಗೆ ಬಂದಿರುವ ಉತ್ತರ ರಾಜ್ಯದಲ್ಲಿ ತೆಗೆದುಕೊಂಡಿರತಕ್ಕಂಥಾದ್ದು 4899 ಮತ್ತು 192 ಏತ ನೀರಾವರಿ ಯೋಜನೆಗಳು ಅಂತ ಅವರು ನನಗೆ ಉತ್ತರ ಕೊಟ್ಟಿದ್ದಾರೆ. ಮಾನ್ಯ ಅಂಗಾರ್‌ರವರಿಗೆ ಅವರು ಎನು ಉತ್ತರ ಕೊಟ್ಟಿದ್ದಾರೆ ಅಂದರೆ ರಾಜ್ಯದಲ್ಲಿ 9 ಸಾವಿರ ವೈಯಕ್ತಿಕ ಕೊಳವೆ ಬಾವಿಗಳು, ಮತ್ತು 9 ಸಾವಿರ ಕೊಳವೆಬಾವಿಗಳು ಗಂಗಾ ಕಲ್ಯಾಣ ಅಂತ ಹೇಳಿದ್ದಾರೆ. ಇದು ಎಕೆ?

ಶ್ರೀ ಕಾಗೋಡು ತಿಮ್ಮಪ್ಪ : ಒಂದು ಘಟಕದಲ್ಲಿ ಎರಡು ಮತ್ತು ಮೂರು ಕೊಳವೆ ಬಾವಿಗಳು ಬರುತ್ತದೆ. ನೀವು ಘಟಕ ಎಂದು ಕೇಳಿದ್ದೀರಿ, ಅದನ್ನು ಕೊಟ್ಟಿದ್ದೇನೆ. ಅವರು ಕೊಳವೆ ಬಾವಿಗಳು ಕೇಳಿದ್ದರು, ಅದನ್ನು ಕೊಟ್ಟಿದ್ದೇವೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಎಂಟು ಸಾವಿರ ಚಿಲ್ಲರೆ ಕೊಳವೆ ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಅಳವಡಿಸಿದ್ದೇವೆ ಎಂದು ಅವರು ಹೇಳಿದ್ದಾರೆ. ಮತ್ತು ಅದು ಸರ್ವೀಸ್ ಕೂಡ ಆಗಿದೆ ಎಂದು ಹೇಳಿದ್ದಾರೆ. ಕೆಲವು ಕಡೆ ಪಂಪ್‌ಸೆಟ್‌ಗಳನ್ನು ಕೊಟ್ಟಿದ್ದಾರೆ; ಪೈಪು ಕೊಟ್ಟಿಲ್ಲ. ಪೈಪು ಕೊಟ್ಟಿದ್ದರೂ ಪೂರ್ತಿಯಾಗಿ ಕೊಟ್ಟಿಲ್ಲ. ಪೈಪ್ ಪೂರ್ತಿಯಾಗಿ ಎಷ್ಟು ಒಳಗಡೆ ಇಳಿಸಬೇಕಾಗಿತ್ತೋ ಅಷ್ಟು ಪೂರ್ತಿಯಾಗಿ ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ನಾನು ಸುಮಾರು ಎರಡು ತಿಂಗಳ ಹಿಂದೆಯೇ ಒಂದು ಸರ್ಕ್ಯೂಲರನ್ನು ಕಳುಹಿಸಿದ್ದೇನೆ. ಸ್ಥಳೀಯ ಶಾಸಕರುಗಳನ್ನು ಸಂಪರ್ಕಮಾಡಿ ಪ್ರತಿಯೊಂದು ಯೋಜನೆಗಳನ್ನು ಪರಿಶೀಲನೆ ಮಾಡಿ ಒಂದು ವರದಿಯನ್ನು ಕಳುಹಿಸಿಕೊಡಬೇಕೆಂದು ಅಧಿಕಾರಿಗಳಿಗೆ ಕೇಳಿದ್ದೇನೆ. ತಮ್ಮನ್ನೆಲ್ಲಾ ಅವರು ಭೇಟಿಯಾಗಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ಸಿ. ಭೈರೇಗೌಡ : ನನ್ನನ್ನಂತೂ ಅವರು ಭೇಟಿಯಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನಾನು ತಮ್ಮನ್ನು ಭೇಟಿ ಮಾಡಿದ ಬಗ್ಗೆ ಪರಿಶೀಲನೆ ನಡೆಸಿದ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿಯನ್ನು ಸಂಪೂರ್ಣವಾಗಿ ಸಂಗ್ರಹ ಮಾಡಿ ಅದನ್ನು ತಮಗೆ ಕೊಡುತ್ತೇನೆ. ಅದರ ಜೊತೆಗೆ ತಮಗೂ ಕೂಡ ಒಂದು ಪತ್ರವನ್ನು ಬರೆಯುತ್ತೇನೆ. ನನಗೆ ಡಿಸ್ಟ್ರಿಕ್ಟ್‌ವೈಸ್ ಒಂದು ದೊಡ್ಡ ಪಟ್ಟಿಯನ್ನು ಕೊಟ್ಟಿದ್ದಾರೆ. ಅದನ್ನು ತಾಲ್ಲೂಕುವೈಸ್ ಪಟ್ಟಿ ಮಾಡಿ ನಿಮ್ಮ ನಿಮ್ಮ ತಾಲ್ಲೂಕಿಗೆ ಎಷ್ಟಷ್ಟು ಇಂಡಿವಿಜುಯಲ್ ಆಗಿ ಏನೆಲ್ಲಾ ಕೊಟ್ಟಿದ್ದಾರೆ ಎನ್ನುವುದನ್ನು ನೋಡೋಣ ಮತ್ತು ತಾಲ್ಲೂಕುಮಟ್ಟದ ಸಮಿತಿಯನ್ನು ರಚನೆ ಮಾಡಿದ್ದೇನೆ. ಅದರಲ್ಲಿ ತಾವು ಕೂಡ ಇದ್ದೀರಿ. ನಾವೆಲ್ಲಾ ಸೇರೋಣ. ಒಂದು ವೇಳೆ ನಿಮಗೆ ಸಾಧ್ಯವಾಗದಿದ್ದರೆ ನೀವು ಬೇರೆ ಯಾರನ್ನಾದರೂ ಕಳುಹಿಸಿಕೊಟ್ಟರೆ ಆ ಮಾಹಿತಿಯನ್ನು ಕೊಡುವ ಪ್ರಯತ್ನವನ್ನು ನಾನು ಮಾಡುತ್ತೇನೆ.

ಶ್ರೀ ಸಿ. ಭೈರೇಗೌಡ : ಈ ರೀತಿಯಾಗಿ ಲೋಪ ಎಲ್ಲೆಲ್ಲಿ ಮಾಡಿದ್ದಾರೆ, ಆ ಲೋಪ ಮಾಡಿರುವ ಅಧಿಕಾರಿಗಳ ಮೇಲೆ ತಕ್ಷಣ ನೀವು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ : ಈ ವರದಿ ಬಂದಮೇಲೆ ಪ್ರತಿಯೊಂದು ಜಿಲ್ಲೆಯ ಮಾನ್ಯ ಶಾಸಕರನ್ನು ನಾನು ಕರೆದು ಚರ್ಚೆ ಮಾಡುತ್ತೇನೆ. ಅಲ್ಲಿ ಸಂಬಂಧಪಟ್ಟ ಅಧಿಕಾರಿಯನ್ನು ಇಟ್ಟುಕೊಳ್ಳುತ್ತೇನೆ. ನ್ಯೂನ್ಯತೆಗಳು ತಾಂತ್ರಿಕವಾಗಿದ್ದರೆ ಸರಿಪಡಿಸುವ ಕೆಲಸ ಮಾಡೋಣ. ಅಥವಾ ಯಾರಾದರೂ ಅಧಿಕಾರಿಗಳಿಂದ ಆ ನ್ಯೂನ್ಯತೆ ನಡೆದಿದ್ದರೆ ಅದಕ್ಕೇನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳೋಣ

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ದೇವರಾಜ ಅರಸುರವರು ಇಲ್ಲಿ ಮುಖ್ಯಮಂತ್ರಿಗಳು ಆಗಿ ಇದ್ದಾಗ, ನಾನು ಅವರು ಅಲ್ಲಿ ಕುಳಿತಿದ್ದೆವು. ಅವರೊಂದು ಮಾತನ್ನು ಹೇಳಿದ್ದರು, "ಮಹರಾಯ, ಈ ಗರಿಕೆ ಹುಲ್ಲಿನ ಬೇರನ್ನು ಕಂಡುಹಿಡಿಯುವುದಕ್ಕಾಗುವುದಿಲ್ಲ ಅದೇ ರೀತಿ ನಿಮ್ಮ ಗೌಡರ ಸಂಬಂಧ ಕಂಡುಹಿಡಿಯುವುದಕ್ಕಾಗುವುದಿಲ್ಲ" ಎಂದು. ಹಾಗೆ ಅವರು ಒಂದು ಸಾರಿ ಇತ್ತಕಡೆ ಇರುತ್ತಾರೆ; ಇನ್ನೊಂದು ಸಾರಿ ಅತ್ತ ಕಡೆ ಇರುತ್ತಾರೆ.

ಅಧ್ಯಕ್ಷರು : ಅವೆಲ್ಲಾ ಬೇಡ; ಅವೆಲ್ಲಾ ಏಕೆ ಇಲ್ಲಿ?

ಶ್ರೀ ಸಿ. ಭೈರೇಗೌಡ : ನನ್ನ ಪ್ರಶ್ನೆಗೆ ಅದು ಉತ್ತರ ಅಲ್ಲ. ಈಗ ಕೆಲವು ಅಧಿಕಾರಿಗಳನ್ನು ಅಲ್ಲಿ ಅಮಾನತ್ತಿನಲ್ಲಿಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಹೌದು, ಒಬ್ಬರನ್ನು ಅಮಾನತ್ತಿನಲ್ಲಿ ಇಟ್ಟಿದ್ದೇವೆ.

ಶ್ರೀ ಸಿ. ಭೈರೇಗೌಡ : ಒಬ್ಬರಲ್ಲ, ಅದು ಬಿಡಿ. ಅವನ್ಯಾರೋ ಯಃಕಶ್ಚಿತ್ ಮನುಷ್ಯನ ಬಗ್ಗೆ ನಾನು ಮಾತನಾಡುತ್ತಿಲ್ಲ. ನಿಮ್ಮ ಕೇಂದ್ರ ಕಛೇರಿಯಲ್ಲಿ ಒಬ್ಬರನ್ನು ಅಮಾನತ್ತಿನಲ್ಲಿಟ್ಟು ಮತ್ತೆ ಅವನನ್ನು ಅಲ್ಲೇ ಹಾಕಿದ್ದಾರೆ. ಇದೇ ಕ್ರಮವನ್ನು ಎಲ್ಲಾ ಕಡೆ ತೆಗೆದುಕೊಳ್ಳುತ್ತೀರಾ ಎಂದು ನನ್ನ ಪ್ರಶ್ನೆ.

ಅಧ್ಯಕ್ಷರು : ತೆಗೆದುಕೊಳ್ಳುತ್ತಾರೆ ಬಿಡಿ.

ಶ್ರೀ ಕೆ. ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೆ, ಈ ಪರಿಶಿಷ್ಟ ಜಾತಿ ಅಭಿವೃದ್ಧಿ ನಿಗಮದ ವತಿಯಿಂದ ವೈಯಕ್ತಿಕ ಮತ್ತು ಸಾಮೂಹಿಕ ಕೊಳವೆಬಾವಿಗಳನ್ನು ಕೊರೆಸಿರುವ ಬಗ್ಗೆ ಉತ್ತರ ಅವರು ಕೊಟ್ಟಿದ್ದಾರೆ. ಆದರೆ ಇಲ್ಲಿ ಕೊಳವೆಬಾವಿಗಳನ್ನು ಕೊರೆಸಲು ಅರ್ಜಿ ಕರೆಯುತ್ತಾರೆ. ಅದು ಆರು ತಿಂಗಳಾಗುತ್ತದೆ. ಅವರು ದಿವಸಾ ಕೆಲಸಬಿಟ್ಟು ಕಚೇರಿಗೆ ಬೆಳಿಗ್ಗೆ ಸಾಯಂಕಾಲ ಸುತ್ತು ಹೊಡೆಯಬೇಕು. ಆ ರೀತಿಯಾಗಿ ಕೊಳವೆಬಾವಿ ಕೊರೆಸುವಷ್ಟರ ಹೊತ್ತಿಗೆ ಅವನ ಜೀವ ಅರ್ಧ ಹೋಗಿರುತ್ತದೆ. ವಿದ್ಯುತ್ ಪಂಪ್‌ಗಳನ್ನು ಕೊಡುವುದಕ್ಕೆ ಸುಮಾರು ಒಂಭತ್ತು ತಿಂಗಳು ತೆಗೆದುಕೊಂಡಿದ್ದಾರೆ. ಅದಕ್ಕೂ ಮೊದಲು ಅವನು ಒಂಭತ್ತು ತಿಂಗಳು ಅಲೆಯಬೇಕು. ಆಮೇಲೆ ಅವನು ಕೆಇಬಿಗೆ ಹೋಗಬೇಕು. ಆದಮೇಲೆ ಪೈಪುಗಳನ್ನು ಕೊಡುವುದಕ್ಕೆ ಸುಮಾರು ಎರಡು ವರ್ಷವಾದರೂ ಸಹಿತ ಈ ಕೆಲಸವನ್ನು ಅಧಿಕಾರಿಗಳು ನಿರ್ವಹಣೆ ಮಾಡುತ್ತಿಲ್ಲ. ಅದಕ್ಕೆ ನನ್ನ ಸಲಹೆ ಏನೆಂದರೆ ಪಲಾನುಭವಿಗಳನ್ನು ಆಯ್ಕೆ ಮಾಡಿದ ಆರು ತಿಂಗಳೊಳಗೆ ಪೂರ್ಣವಾಗಿ ವಿದ್ಯುತ್ ಕೊಟ್ಟು ನೀರನ್ನು ಅವರ ಜಮೀನಿಗೆ ಬಿಡುವ ವ್ಯವಸ್ಥೆಯ ಬಗ್ಗೆ ಒಂದು ಕಾನೂನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಶಾಸಕರುಗಳು ಆಯಾ ಕ್ಷೇತ್ರದಲ್ಲಿ ಓಡಾಡುವಾಗಲೂ ಜನರು ಇರುವುದಿಲ್ಲ. ಎಸ್.ಸಿ / ಎಸ್‌ಟಿ ಕಾರ್ಪೊರೇಷನ್‌ನ ಫೀಲ್ಡ್ ಆಫೀಸರ್‌ಗಳು ಇದ್ದಾರಲ್ಲ, ಅವರೇನಾದರೂ ಟೌನ್‌ನಲ್ಲಿ ಓಡಾಡುತ್ತಿದ್ದಾರೆಂದರೆ ಅವರ ಹಿಂದೆ ಒಂದು ಹಿಂಡು ಇರುತ್ತದೆ. ಈ ಭೂಮಿ ಖರೀದಿ ಮಾಡಿಸುವವರು, ಮತ್ತೆ ಈ ಗಂಗಾ ಕಲ್ಯಾಣ ಯೋಜನೆ ವೈಯಕ್ತಿಕ ಕೊಳವೆಬಾವಿ ಯೋಜನೆಯಡಿಯಲ್ಲಿ ಬರುವವರು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಅವರ ಹಿಂದೆಯೇ ಸುತ್ತುತ್ತಿರುತ್ತಾರೆ. ನೀವು ಕ್ರಮ ತೆಗೆದುಕೊಳ್ಳುವುದಾದರೆ ನಾನು ಹೇಳುತ್ತೇನೆ. ಬಹುತೇಕ ಎಲ್ಲಾ ಫೀಲ್ಡ್ ಆಫೀಸರ್‌ಗಳು ಹಣ ದುರುಪಯೋಗ ಮಾಡುತ್ತಿದ್ದಾರೆ. ತಾವು ಕೂಡ ಮೈಸೂರಿಗೆ ಮೂರು - ನಾಲ್ಕು ಬಾರಿ ಬಂದಿದ್ದೀರಿ. ನಮ್ಮ ಚಾಮರಾಜನಗರಕ್ಕೊಮ್ಮೆ ಭೇಟಿ ಕೊಟ್ಟು ಜಿಲ್ಲೆಯಲ್ಲಿ ಏನು ನಡೆಯುತ್ತಿದೆ, ಅದನ್ನು ತಿಳಿದುಕೊಳ್ಳಿ. ಮತ್ತೆ ಕೊಳವೆ ಬಾವಿ ಕೊರೆದುಬಿಟ್ಟು ಎಲೆಕ್ಟ್ರಿಸಿಟಿ ಸರ್ವೀಸ್ ಕೊಡುವುದನ್ನು ವರ್ಷಗಟ್ಟಲೆಯಾದರೂ ಮಾಡುವುದಿಲ್ಲ. ಎಲ್ಲಾ ರಿಮೋಟ್ ಪ್ಲೇಸ್‌ನಲ್ಲಿರುತ್ತವೆ. ಈ ಪರಿಶಿಷ್ಟ ಜಾತಿ ವರ್ಗದವರ

ಜಮೀನುಗಳು. ಹಾಗಾಗಿ ಅವೆಲ್ಲಾ ಹಿಂದೆ ಲ್ಯಾಂಡ್ ಗ್ರಾಂಟ್‌ನಲ್ಲಿ ಕೊಟ್ಟಿರುವ ಜಮೀನುಗಳು; ಅದಕ್ಕೆ ಕೆಇಬಿ ಯವರಿಗೆ ಈ ಒಂದು ಕಾರ್ಪೋರೇಷನ್‌ನಿಂದ ಬರುವ ಅರ್ಜಿಗಳನ್ನು ಆದ್ಯತೆ ಮೇಲೆ ಕೊಡುವ ಒಂದು ವ್ಯವಸ್ಥೆ ಮಾಡಬೇಕು.

ಶ್ರೀ ಹೆಚ್. ಪಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, 19419 ಕೊಳವೆ ಬಾವಿಗಳನ್ನು ವಿವಿಧ ಯೋಜನೆಗಳಲ್ಲಿ ತೋಡಿಸಲಾಗಿದೆ ಎಂದು ಅವರಿಂದ ಉತ್ತರ ಬಂದಿದೆ. ಇದರಲ್ಲಿ ಎಷ್ಟು ಬಾವಿಗಳು ವಿಫಲವಾಗಿವೆ? ಈ ರೀತಿ ವಿಫಲವಾಗಿರುವ ಬಾವಿಗೆ ಹಣವನ್ನು ಪಾವತಿ ಮಾಡಲಾಗಿದೆಯೇ? ಇಷ್ಟು ಬಾವಿಗಳನ್ನು ತೋಡಿಸಲು ಒಂದು ಬಾವಿಗೆ 20 ಸಾವಿರದಿಂದ 50 ಸಾವಿರ ರೂ.ವರೆಗೆ ಖರ್ಚಾಗಿದೆ ಎಂದು ಹೇಳಿದ್ದಾರೆ. ನನಗೆ ದಯವಿಟ್ಟು ಇದರ ಬಗ್ಗೆ ಮಾಹಿತಿ ಕೊಡಿ, ಒಂದು ಬಾವಿಯನ್ನು ತೋಡಿಸಲು ಏನು ದರವನ್ನು ನಿಗದಿ ಮಾಡಿದ್ದೀರಿ? ಹಾಗೂ ಕೇಸಿಂಗ್ ಪೈಪ್ ಹಾಕುವಾಗ ಒಂದು ಮೀಟರ್‌ಗೆ ಎಷ್ಟು ದರವನ್ನು ಏನು ನಿಗದಿ ಮಾಡಿದ್ದೀರಿ? ಇನ್ನು ಮೂರನೆಯದು, ಸನ್ಮಾನ್ಯ ಸಚಿವರು , ಅಧಿಕಾರಿಗಳು ಸಂಬಂಧಪಟ್ಟ ಶಾಸಕರನ್ನು ಭೇಟಿ ಮಾಡಿ ಕ್ರಮ ತೆಗೆದುಕೊಳ್ಳುವ ಬಗ್ಗೆ ಆದೇಶ ಕೊಡುತ್ತೇನೆಂದು ಹೇಳಿದ್ದಾರೆ. ಕಳೆದ ಆರು ತಿಂಗಳಲ್ಲಿ ನಾನು ನಮ್ಮ ತಾಲ್ಲೂಕಿನಲ್ಲಿ ಎರಡು ಪ್ರಗತಿ ಪರಿಶೀಲನಾ ಸಭೆಗಳನ್ನು ಮಾಡಿದ್ದೇನೆ. ಅಲ್ಲಿ ಜಿಲ್ಲಾಧಿಕಾರಿಗಳಿಗೆ ಮತ್ತು ತಾಲ್ಲೂಕಿನ ಅಧಿಕಾರಿಗಳಿಗೆ ಹೇಳಿಕಳುಹಿಸಿದರೂ ಒಂದು ಸಭೆಗೂ ಕೂಡ ಅವರು ಬಂದಿಲ್ಲ. ಸದ್ಯಕ್ಕೆ ಪ್ರತಿಯೊಬ್ಬ ಜಿಲ್ಲಾಧಿಕಾರಿಗಳು ಕೂಡ ಸಂಬಂಧಪಟ್ಟ ಪ್ರಗತಿ ಪರಿಶೀಲನಾ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ಹೇಳಿ ಒಂದು ನಿರ್ದೇಶನವನ್ನು ಮಾನ್ಯ ಸಚಿವರು ಕೊಡಬೇಕೆಂದು ನಾನು ಹೇಳ ಬಯಸುತ್ತೇನೆ.

ಶ್ರೀ ಪ್ರಭಾಕರ ಕೆ. ಬಂಗೇರ : ಮಾನ್ಯ ಅಧ್ಯಕ್ಷರೆ, ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವೈಯಕ್ತಿಕವಾಗಿ ಈ ಗಂಗಾ ಕಲ್ಯಾಣ ಯೋಜನೆಯಲ್ಲಿ ಎಷ್ಟು ಎಕರೆ ಇದ್ದರೆ ಅವರಿಗೆ ಕೊಳವೆಬಾವಿ ಮಾಡುವುದಕ್ಕೆ ಅವಕಾಶ ಇದೆ? ಹಾಗೆಯೇ ಸಾಮೂಹಿಕವಾದ ಗಂಗಾಕಲ್ಯಾಣ ಯೋಜನೆ ಕೂಡ ಇದೆ. ಅಲ್ಲಿ ಕೂಡ ಎಷ್ಟು ಜನರು ಆ ಸಾಮೂಹಿಕ ಗಂಗಾ ಕಲ್ಯಾಣ ಯೋಜನೆಯಲ್ಲಿ ಇರಬೇಕು? ಅವರನ್ನು ಗುರುತಿಸಿದ ನಂತರ ಎಷ್ಟು ಸಮಯದೊಳಗೆ ಅವರಿಗೆ ಅದರಿಂದ ಉಪಯೋಗ ಪಡೆಯಲಿಕ್ಕೆ, ವಿದ್ಯುಚ್ಛಕ್ತಿ ಒದಗಿಸಿ, ಪಂಪ್‌ಸೆಟ್‌ನ್ನು ಒದಗಿಸಿ ಆ ಮೂಲಕ ಅವರಿಗೆ ಅನುಕೂಲ ಮಾಡಿಕೊಡುವ ಯೋಜನೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇದೆ?

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್ : ಮಾನ್ಯ ಅಧ್ಯಕ್ಷರೆ, 4893 ಬಾವಿಗಳನ್ನು ತೋಡಿದ್ದೇವೆ ಎಂದು ಅವರು ಹೇಳಿದ್ದಾರೆ. ಈ ಬಾವಿಗಳನ್ನು ಎಷ್ಟೆಷ್ಟು ಆಳ ತೋಡಿದ್ದಾರೆ ಎನ್ನುವ ಬಗ್ಗೆ ಈಗಾಗಲೇ ಇದರ ಬಗ್ಗೆ ಸಮೀಕ್ಷೆ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿರಬಹುದು. ಇಲ್ಲಿ ಏನಾಗಿದೆ ಎಂದರೆ ನೂರು ಅಡಿಗಳಷ್ಟು ಆಳಕ್ಕೆ ತೋಡಿದ್ದರೆ 200 ಅಡಿಗಳು ಎಂದು ಬರೆಸುತ್ತಾರೆ. ಪೈಪ್‌ಗಳನ್ನು ಜೋಡಣೆ ಮಾಡುವಾಗ ಎರಡು ಲೆಂತ್‌ಗಳನ್ನು ಹಾಕಿದ್ದರೆ ನಾಲ್ಕು ಲೆಂತ್ ಎಂದು ಬರೆದುಕೊಂಡು ಬಂದಿರುವುದು ಇದೆ. ಈ ಎಲ್ಲಾ ಅವ್ಯವಹಾರಗಳ ಬಗ್ಗೆ ತಾವು ತನಿಖೆಯನ್ನು ಮಾಡಿಸುತ್ತೀರಾ?

ಶ್ರೀ ಬಿ. ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ, ಈ ಎಸ್‌ಸಿ ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಆಗುವ ವಿಳಂಬ ನೀತಿ ಬೇರೆ ಎಲ್ಲೂ ಆಗುವುದಿಲ್ಲ. ಇದರ ಬಗ್ಗೆ ಒಂದು ಗಾದೆ ಹೇಳುತ್ತಾರೆ. "ನನ್ನ ಗಂಡ ಬಹಳ ಚೆನ್ನಾಗಿದ್ದಾನೆ, ಮನೆಗೆ ಮಾತ್ರ ಬರುವುದಿಲ್ಲ" ಎಂದು. ಈ ಕಾರ್ಪೊರೇಷನ್ ಬಹಳ ಚೆನ್ನಾಗಿದೆ. ಕೇಂದ್ರದ್ದು ಮತ್ತು ರಾಜ್ಯದ್ದು ಸವಲತ್ತುಗಳು ಸೇರಿ ಬಹಳ ಉದ್ಯಮ ಕೊಡುತ್ತೆ. ಆದರೆ ಒಂದು ಟೈಮ್ ಬೌಂಡ್ ಹಾಕಿಕೊಂಡು ಕೆಲಸ ಮಾಡುವುದಿಲ್ಲ. ಅಲ್ಲಿನ ಅಧಿಕಾರಿಗಳು, ನಮ್ಮ ಚಂದ್ರೇಗೌಡರು ಕರೆದರೂ ಯಾವ ಸಭೆಗೂ ಬರುವುದಿಲ್ಲ; ಅವರು ಜಿಲ್ಲಾ ಸಚಿವರ ಸಭೆಗೆ ಬರುವುದಿಲ್ಲ ಎಂದರೆ ಶಾಸಕರುಗಳಾದ ನಮ್ಮ ಗತಿಯೇನು? ತಾವು ನಿಗಮ ಮಾಡಿದ ಆರು ತಿಂಗಳೊ ಅಥವಾ ಒಂದು ವರ್ಷದ ಒಳಗಾಗಿ ಅವರು ಮಾಡಲೇಬೇಕು, ಹಾಗೆ ಮಾಡದಿದ್ದರೆ, ಏಕೆ ಮಾಡಿಲ್ಲ ಎಂದು ಕೇಳಲು ನಿಖರವಾದ ಸೂಚನೆಯನ್ನು ಕೊಡದಿದ್ದರೆ ಸರ್ಕಾರದ ಎಲ್ಲಾ ಸವಲತ್ತುಗಳು ದುರುಪಯೋಗವಾಗುತ್ತದೆ. ಎಸ್‌ಸಿ ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಆಗಿರುವ ಅನ್ಯಾಯದ ಬಗ್ಗೆ ದೂರು ಕೊಟ್ಟಾಗ ಅದನ್ನು ತಾವು ಪರಿಶೀಲನೆ ಮಾಡಬೇಕು.

ಶ್ರೀ ಜಿ. ರಾಜುಗೌಡ : ಮಾನ್ಯ ಅಧ್ಯಕ್ಷರೆ, ಕೊಳವೆಬಾವಿ ಬಗ್ಗೆ ಒಂದು ಹೊಸ ನೀತಿಯನ್ನು ತಾವು ರೂಪಿಸಿಕೊಳ್ಳಬೇಕು. ಯಾವ ಜಿಲ್ಲೆಯಲ್ಲಿ ತಾವು ಕೊಳವೆಬಾವಿಗಳನ್ನು ಮಂಜೂರು ಮಾಡುತ್ತೀರಿ, ಅದು ಗಂಗಾಕಲ್ಯಾಣ ಯೋಜನೆ ಇರಬಹುದು ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ ಇರಬಹುದು. ಆಯಾ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಅಲ್ಲಿರುವ ಕೆಇಬಿ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರನ್ನು ಕರೆಸಿ ಎಷ್ಟು ಬಾವಿಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕೆ ಸಾಧ್ಯ ಎಂದು ತಿಳಿದುಕೊಂಡು ಮಾಡಿದರೆ ಆ ಕೆಲಸ ಬೇಗ ಆಗುತ್ತದೆ ಎಂದು ನನ್ನ ಸಲಹೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಇದು 1996 ರಿಂದ ಹುಟ್ಟಿರುವ ರೋಗ. ಆ 1996 ರಿಂದ 1999 ರವರೆಗೆ, ಆರೀತಿ ಬೆಳೆದ ರೋಗವನ್ನು ಈಗ ಗುಣಪಡಿಸಬೇಕಾದ ಕೆಲಸಕ್ಕೆ ಇದೆಲ್ಲಾ ತೊಂದರೆಯಾಗಿರುವುದು ಇದರಲ್ಲಿ ವಿಳಂಬವಾಗಿರುವುದು ನಿಜ. ಆ ವಿಳಂಬವನ್ನು ನಾವು ತೊಡೆದು ಹಾಕಬೇಕಾಗಿದೆ. ಆ ಹೊರೆಯನ್ನು ನಾವು ತಲೆಮೇಲೆ ಹಾಕಿಕೊಳ್ಳಬೇಕಾಗಿದೆ; ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಮಾನ್ಯ ಪುಟ್ಟರಂಗನಾಥ್‌ರವರು ಹೇಳಿದಂತಹ ವಿಚಾರದಲ್ಲಿ, ಇದನ್ನು ಅಳತೆ ಮಾಡಿ ನೋಡುವುದಕ್ಕೆ ಒಂದು ಟೆಸ್ಟಿಂಗ್ ಮೆಷಿನ್ಸ್ ಇದೆ. ಎಷ್ಟು ಆಳಕ್ಕೆ ಪೈಪನ್ನು ಹಾಕಿದ್ದಾರೆ ಎಂಬುದನ್ನು ಇದರಿಂದ ನೋಡಬಹುದು. ಬೇಕಾದರೆ ನಿಮ್ಮ ಮದ್ದಿನಿಂದಲೇ ಕಂಡುಹಿಡಿಯುವುದಾದರೆ ಅದನ್ನೂ ಮಾಡೋಣ, ಇಲ್ಲದಿದ್ದರೆ ಬೇರೆ ರೀತಿಯಿಂದಲಾದರೂ ವೆರಿಫೈ ಮಾಡೋಣ, ಆದರಲ್ಲೇನು ಅನುಮಾನವಿಲ್ಲ. ಮಾನ್ಯ ಬಸವರಾಜುರವರು ಹೇಳಿದರಲ್ಲ, ಬಾವಿಯಲ್ಲಿ ನೀರು ಬರದಿದ್ದರೆ ದುಡ್ಡು ಕೊಡುವುದಿಲ್ಲ ಎಂದು ಟರ್ನ್‌ಕೀ ಬೇಸಿಸ್ ಮೇಲೆ ಕೊಟ್ಟಿದ್ದರಿಂದ ಯಾರಿಗೆ ನೀರು ಬಂದಿಲ್ಲವೋ ಅವರಿಗೆ ದುಡ್ಡು ಕೊಡುವುದಿಲ್ಲ. ವೈಯಕ್ತಿಕ ಕೊಳವೆಬಾವಿಗೆ ಕನಿಷ್ಟ ಎರಡು ಎಕರೆ ಇರಬೇಕು. ಗಂಗಾಕಲ್ಯಾಣ ಯೋಜನಾ ಗ್ರೂಪ್‌ಗೆ ಕನಿಷ್ಟ 8 ರಿಂದ 15 ಎಕರೆ ಇರಬೇಕು. ಜಿಲ್ಲಾಮಟ್ಟದ ಸಮಿತಿಗಳಲ್ಲಿ ಜಿಲ್ಲಾಧಿಕಾರಿಗಳನ್ನು ಅಧ್ಯಕ್ಷರಾಗಿ ಮಾಡಿ ಜಮೀನುಗಳನ್ನು ಕೊಳ್ಳುವುದು, ಬೋರ್‌ವೆಲ್‌ಗಳನ್ನು

ಮಾಡುವುದು ಇದೆ. ಈ ಕಾರಣಕ್ಕಾಗಿ ಜಿಲ್ಲಾ ಕಛೇರಿ ಮುಂದೆ ತಿರುಗುತ್ತಾರಲ್ಲ, ನಮ್ಮ ಶಾಸಕರ ಸುತ್ತ ವಿಧಾನಸೌಧದ ಸುತ್ತ ಸುತ್ತುತ್ತಾರಲ್ಲ, ಅವರುಗಳು ತೋಡಿಸಿರುವುದೇ ಜಾಸ್ತಿ. ಅದಕ್ಕೆ ಈ ಸಾರಿ ತಾಲ್ಲೂಕುಮಟ್ಟದ ಸಮಿತಿಗಳನ್ನು ಮಾಡಿ ಅಲ್ಲೇ ಆಯ್ಕೆ ಮಾಡುವ ಕೆಲಸವನ್ನು ಮಾಡಿ, ಜೊತೆ ಜೊತೆಗೆ ಕೆಲವರಿಗೆ ಇದು ಸಿಕ್ಕಿದೆ, ಇನ್ನು ಕೆಲವರಿಗೆ ಸಿಕ್ಕೇ ಇಲ್ಲ; ಇದು ಉಂಡವನೇ ಜಾಣ ಎನ್ನುವಂತಾಗಿದೆ. ಅದಕ್ಕೋಸ್ಕರ ಇದು ಆಗಬಾರದು. ಎಲ್ಲರಿಗೂ ಸಮಾನವಾಗಿ ಹಂಚುವ ಕೆಲಸವನ್ನು ಮಾಡುತ್ತೇವೆ. ಜೊತೆಗೆ ಆಯಾ ವರ್ಷ ನಾವು ಎಷ್ಟನ್ನು ಇಟ್ಟುಕೊಂಡಿರುತ್ತೇವೋ, ಹೋದವರ್ಷ ಈ ವರ್ಷ ಕಡಿಮೆ ಇತ್ತು; 500 ಅಥವಾ ಒಂದು ಸಾವಿರ ಈ ರೀತಿ ಸಿಗುತ್ತೆ. ಅವುಗಳನ್ನು ಆಯಾ ವರ್ಷವೇ ಕಡಿಮೆ ಇದ್ದರೂ ಡ್ರಿಲ್ಲೂ ಮಾಡಿಸಬೇಕು. ವಿದ್ಯುಚ್ಛಕ್ತಿಯನ್ನೂ ಕೊಡಬೇಕು ಮತ್ತು ಅವರು ಸಿವಿಲ್ ವರ್ಕ್ಸ್‌ನ್ನೂ ಮಾಡಬೇಕು. ಇದನ್ನು ನಾವು ಮಾಡುತ್ತೇವೆ. ಈ ಕೊಳೆಯನ್ನು ಒಂದು ಸಾರಿ ತೊಳೆದುಬಿಟ್ಟರೆ ಆಗ ಈ ಸಮಸ್ಯೆಗಳೆಲ್ಲಾ ಬಗೆಹರಿಯುತ್ತವೆ. ಇನ್ನು ಕೆಲವು ಕಡೆ ಫ್ಲಷ್ ಮಾಡುವುದು ಇದೆ. ಅಂತಹವು ಸುಮಾರು 280 ಇರಬಹುದು. ಎರಡು ವರ್ಷ ಮೂರು ವರ್ಷದಿಂದ ಅದಕ್ಕೆ ಪಂಪ್‌ಸೆಟ್ ಹಾಕದೇ ಇರುವುದರಿಂದ ಅವೆಲ್ಲಾ ಸಿಲ್ಟಪ್ ಆಗಿವೆ. ಅವನ್ನೆಲ್ಲಾ ಫ್ಲಷ್‌ಔಟ್ ಮಾಡುವುದು ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : 1996 ರಿಂದ 1998 ವರೆಗೆ ಬಹಳ ಕೊಳೆ ಇದೆ ಎಂದು ಹೇಳಿದರು. ಈ ಕೊಳಾಯಿ ಯೋಜನೆ ಪ್ರಾರಂಭವಾಗಿದ್ದೇ ಆಗ ಎಂದು ಹೇಳುವುದನ್ನು ಮರೆತರು.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಮಾಡಿದ್ದೀರಿ. ನಿಮಗೆ ಶಹಭಾಷ್‌ಗಿರಿಯನ್ನು ಕೊಡುತ್ತೇನೆ. ತಾವು ಪ್ರಾರಂಭ ಮಾಡಿದ್ದೀರಿ. ಅದು ಒಳ್ಳೆಯ ಕೆಲಸ. ಅದನ್ನೇ ಮುಂದುವರೆಸುತ್ತೇವೆಂದು ನಾನು ಹೇಳಿದ್ದು. ಯಾವ ವರ್ಷದಲ್ಲಿ ಡ್ರಿಲ್ ಮಾಡಿದ್ದರೋ ಆಯಾ ವರ್ಷದಲ್ಲೇ ಪಂಪನ್ನು ಅಳವಡಿಸಿ ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಅದರ ಚಿಂತೆ ಇಲ್ಲ. ಒಳ್ಳೆಯ ಕೆಲಸವಾಗಿದೆ. ಇಲ್ಲಿ ವಿಳಂಬವಾಗಿದೆ. ಸ್ವಲ್ಪ ಹಣದ ಕೊರತೆಯೂ ಇದೆ. ಹಿಂದಿನ ಬಜೆಟ್‌ನಲ್ಲಿ ಹಣದ ಕೊರತೆ ಇದೆ. ಈ ವರ್ಷದಲ್ಲಿ ಹಣ ತೆಗೆದುಕೊಂಡು ಅದನ್ನು ಕಂಪ್ಲೀಟ್ ಮಾಡಬೇಕಾಗಿದೆ. ನಮಗೆ ಇವುಗಳನ್ನೆಲ್ಲಾ ಮುಗಿಸುವುದಕ್ಕೆ ಇನ್ನೂ 28 ಕೋಟಿ ರೂಪಾಯಿಗಳು ಬೇಕಾಗಿದೆ. ವಿದ್ಯುಚ್ಛಕ್ತಿ ಮಂಡಲಿಗೆ 16 ಕೋಟಿ ರೂಪಾಯಿಗಳನ್ನು ಅಂದಿನ ಮುಖ್ಯಮಂತ್ರಿಗಳು ಕೊಡಿಸಿಬಿಟ್ಟರು. ಈಗ ಅದರಲ್ಲಿ ಎಂಟು ಕೋಟಿ ರೂಪಾಯಿಗಳನ್ನು ವಾಪಸ್ ತೆಗೆದುಕೊಂಡಿದ್ದೇವೆ. ಇನ್ನು ಎಂಟು ಕೋಟಿ ರೂಪಾಯಿಗಳನ್ನು ವಾಪಸ್ ತೆಗೆದುಕೊಳ್ಳಬೇಕಾಗಿದೆ. ವಿದ್ಯುಚ್ಛಕ್ತಿಗೆ ಕೊಡುವುದನ್ನು ವಿಶೇಷ ಘಟಕ ಯೋಜನೆಯಲ್ಲಿ ಕೊಡಬೇಕಾಗಿದೆ. ಆದರೆ ಕಾರ್ಪೊರೇಷನ್ 16 ಕೋಟಿ ರೂಪಾಯಿಗಳನ್ನು ಕೊಡಿಸಿದ ಕಾರಣಕ್ಕಾಗಿ ಇವತ್ತು ನಮ್ಮ ಕೆಲಸಕ್ಕೆ ಹೊಡೆತ ಬಿತ್ತು. ಅದರಿಂದ ನಾವು ಬಂದಾದ ಮೇಲೆ ಎಂಟು ಕೋಟಿ ರೂಪಾಯಿಗಳನ್ನು ವಾಪಸ್ ತೆಗೆದುಕೊಂಡಿದ್ದೇವೆ. ಇನ್ನು ಎಂಟು ಕೋಟಿ ರೂಪಾಯಿಗಳನ್ನು ವಾಪಸ್ ಕೊಡಬೇಕಾಗಿದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರಿಗೆ ಬಾಕಿ ಕೊಡುವುದು ತಮ್ಮದೇ ಇನ್ನೂ ಮೂರುವರೆ ಕೋಟಿ ರೂಪಾಯಿಗಳು ಇದ. ಇವೆಲ್ಲಾ ಆಗಿದೆ. ಏನೆ ಇರಲಿ. ಇದನ್ನು ಬಗೆಹರಿಸಿ ಫಲಾನುಭವಿಗಳಿಗೆ ಇದರ ಪ್ರತಿಫಲ ಸಿಗುವ ರೀತಿಯಲ್ಲಿ ನಾನು ಖಂಡಿತಾ

ಮಾಡುತ್ತೇನೆ. ಒಂದು ತಿಂಗಳು ಅವಕಾಶ ಕೊಟ್ಟರೆ ಇವೆಲ್ಲವನ್ನು ಸಮರ್ಪಕವಾದ ರೀತಿಯಲ್ಲಿ ನಾವು ಮಾಡುತ್ತೇವೆ. ತಾವು ಕೂಡ ಬಂದು ಪರಿಶೀಲನೆ ಮಾಡಿ ಒಂದು ವರದಿಯನ್ನು ಕೊಟ್ಟರೆ ತುಂಬಾ ಕೃತಜ್ಞನಾಗುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು : ಮಾನ್ಯ ಅಧ್ಯಕ್ಷರೆ, 18ನೇ ಆ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 68 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದೆ ಮಂಡಿಸುತ್ತೇನೆ.

ಸುಳ್ಯ ಕ್ಷೇತ್ರಕ್ಕೆ ಎಸ್. ಸಿ: ಎಸ್. ಟಿ ರ ಅಭಿವೃದ್ಧಿ ನಿಗಮದಡಿ ಕೊರೆಯಲಾದ ಬಾವಿಗಳು

2022 (2434) : **ಶ್ರೀ ಅಂಗಾರ ಎಸ್. (ಸುಳ್ಯ) :** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯೊಳಗೆ ಪರಿಶಿಷ್ಟ ಜಾತಿ : ಪಂಗಡಗಳ ಅಭಿವೃದ್ಧಿ ನಿಗಮದಿಂದ 1996 ರಿಂದ 99 ರವರೆಗೆ ಕೊರೆಯಲಾದ ಕೊಳವೆ ಬಾವಿಗಳು ಎಷ್ಟು; ಯಾವ ಯಾವ ಯೋಜನೆಯಡಿಯಲ್ಲಿ ಕೊರೆಯಲಾಗಿದೆ; (ಗ್ರಾಮವಾರು ವಿವರ ನೀಡುವುದು)

(ಆ) 1996 ರಿಂದ 99 ರವರೆಗೆ ಕೊರೆಯಲಾದ ಕೊಳವೆಬಾವಿಯಲ್ಲಿ ಎಷ್ಟು ಕೊಳವೆಬಾವಿಗಳು ಕೆಟ್ಟು ಹೋಗಿವೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) 1996 ರಿಂದ 1999 ರವರೆಗಿನ ಅವಧಿಯಲ್ಲಿ ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಗಂಗಾ ಕಲ್ಯಾಣ ಯೋಜನೆಯಡಿ ಒಂದು ಯಶಸ್ವಿ ಕೊಳವೆಬಾವಿಯನ್ನು ಸುಳ್ಯ ತಾಲ್ಲೂಕಿನ ಬೆಳ್ಳಾರೆ ಗ್ರಾಮದಲ್ಲಿ ಕೊರೆಯಲಾಗಿದೆ.

(ಆ) ಇಲ್ಲ